ಓ ಎಸ್ ನಂಃ 249/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 29-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ವಾದಿ ಪರ ಶ್ರೀ ಎ ಆರ್ ಪಿ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನನ್ನ ಮತ್ತು ಪ್ರತಿವಾದಿಯ ನಡುವೆ ಆಗಿರುವ ದಿಃ 05-07-2021 ರ ಬಿನ್ ಕಬ್ಜಾ ಖರೀದಿ ಕರಾರು ಪತ್ರ ಹಾಜರುಪಡಿಸಿದ್ದೇನೆ . ಸದರಿ ದಾಖಲೆಯಲ್ಲಿ ನನ್ನ , ಪ್ರತಿವಾದಿ ಹಾಗೂ ಸಾಕ್ಷಿದಾರರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಯಿತು . ಸಾಕ್ಷಿ ಗುರುತಿಸಿದ ತನ್ನ 5 ಸಹಿಗಳನ್ನು ಕ್ರಮವಾಗಿ ನಿಪಿ-1 (ಎ) ರಿಂದ ನಿಪಿ-1 (ಇ) ಎಂದು ಗುರುತಿಸಲಾಯಿತು . ನಿಪಿ-1 ರಲ್ಲಿರುವ ಪ್ರತಿವಾದಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ಗುರುತಿಸಿದ ಪ್ರತಿವಾದಿಯ 4 ಸಹಿಗಳನ್ನು ಕ್ರಮವಾಗಿ ನಿಪಿ-1 (ಎಫ್) ರಿಂದ ನಿಪಿ-1 (ಐ) ಎಂದು ಗುರುತಿಸಲಾಯಿತು . ನಿಪಿ-1 ರಲ್ಲಿರುವ ಸಾಕ್ಷಿದಾರ ಈರಪ್ಪ ಸುಂಕದ ಇವರ ಸಹಿಗಳನ್ನು ಗುರುತಿಸಿದ ಮೇರೆಗೆ ನಿಪಿ-1 (ಜೆ) ಎಂದು ಮತ್ತು ನಿಪಿ-1 (ಕೆ) ಎಂದು ಗುರುತಿಸಲಾಯಿತು . ನಿಪಿ-1 ರಲ್ಲಿರುವ ಸಾಕ್ಷಿದಾರ ಬಸಯ್ಯ ಚನ್ನಯ್ಯ ಭಂಡಾರಿ ಇವರ ಸಹಿಗಳನ್ನು ಗುರುತಿಸಿದ ಮೇರೆಗೆ ನಿಪಿ-1 (ಎಲ್) ಎಂದು ಮತ್ತು ನಿಪಿ-1 (ಎಂ) ಎಂದು ಗುರುತಿಸಲಾಯಿತು .

ಗರಗ ಹೊಬಳಿ ತಡಕೋಡ ಗ್ರಾಮದ ಬ್ಲಾಕ ನಂಃ 573/2 ಜಮೀನಿನ ಉತಾರ ಹಾಜರುಪಡಿಸಿದ್ದೇನೆ . ಅದನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಗುರುತಿಸಿದ

ದಾಖಲೆಯನ್ನು ನಿಪಿ-2 ಎಂದು ಗುರುತಿಸಲಾಯಿತು . ಅಂಚೆ ಸ್ವೀಕೃತಿ ಹಾಜರುಪಡಿಸಿದ್ದೇನೆ . ಅದನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ-3 ಎಂದು ಗುರುತಿಸಲಾಯಿತು . ದಿಃ 28-04-2023 ರ ಖರೀದಿ ಪತ್ರದ ಗಣಕೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ . ಅದನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ-4 ಎಂದು ಗುರುತಿಸಲಾಯಿತು .

**ವಾದಿ ಪರ ವಕೀಲರ ಕೊರಿಕೆಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದುಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.